

# ಸಮಾಜ ವಿಜ್ಞಾನ

**SOCIAL SCIENCE - KANNADA MEDIUM**

## ಮೂರನೇ ತರಗತಿ

**STANDARD THREE**

## ಹಂತ - II

**TERM - II**



ಸಮಾಜ ವಿಜ್ಞಾನ



# 1. ಪ್ರಯಾಣ ಬೆಳೆಸೋಣವೆ ?





ಸೇಂಬಿಯನ್ ಬಾಗಿಲಲ್ಲಿ ನಿಂತು ಕಾಯುತ್ತಿದ್ದಾನೆ. "ಕಟ್ಟಿಗೆ ತರಲು ಹೋದ ಅಪ್ಪ ಇನ್ನು ಬರಲಿಲ್ಲವಲ್ಲ, ಯಾವಾಗಲು ಒಂದೆರಡು ದಿನಗಳಲ್ಲಿ ಮರಳಿ ಬರುವ ಅವರು, ಈ ಬಾರಿ ಹೋಗಿ ಒಂದು ವಾರವಾದರೂ ಬರಲೇಇಲ್ಲಾ! ನಮ್ಮ ಅಪ್ಪ ತುಂಬಾ ಎಚ್ಚರಿಕೆಯಿಂದರುವವರು. ಕಾಡಿನಲ್ಲಿ ಗೊತ್ತಿಲ್ಲದ ದಾರಿಯಲ್ಲಿ ಹೋಗಿ ಆಪತ್ತನ್ನು ತಂದುಕೊಳ್ಳುವವರಲ್ಲ" ಎಂದುಕೊಂಡುನು.

ಒಂದೊಂದು ಬಾರಿಯೂ ಹಿಂತಿರುಗಿ ಬರುವಾಗ ಸೇಂಬಿಯನ್‌ಗೆ ಒಂದು ಹೊಸ ಕಥೆಯೊಡನೆ ಬರುತ್ತಿದ್ದರು. ಅವರು ಕಾಡಿನಲ್ಲಿ ನೋಡಿದ ಸುಂದರ, ವಿನೋದವಾದ ಹೊಸ ಪ್ರಾಣಿಗಳ ಬಗ್ಗೆ ಹೇಳುವರು. ಸೇಂಬಿಯನ್‌ಗೆ ಅಪ್ಪನ ಜೊತೆ ಕಾಡಿಗೆ ಹೊಗಲು ತುಂಬಾ ಆಸೆ. ಆದರೆ ಸೇಂಬಿಯಾನ್ ಸಣ್ಣವನಾಗಿರುವುದರಿಂದ ಇನ್ನು ಹಲವು ವರ್ಷಗಳು ಅವನು ಕಾಯಬೇಕು.

ದಿಢೀರ್ ಎಂದು ಗಡಗಡ ಎನ್ನುವ ಉರುಳುವ ಶಬ್ಧವನ್ನು ಸೇಂಬಿಯನ್ ಕೇಳಿದನು. ಮೊದಲು ಬಯಪಟ್ಟನು, ನಂತರ ಏನೆಂದು ನೋಡಲು ಓಡಿದನು. ಅಲ್ಲಿ ಅವನ ಅಪ್ಪ ಹೊಸದಾಗಿ ಯಾವುದೋ ಒಂದನ್ನು ಎಳೆದುಕೊಂಡು ಬಂದರು. ಅದು ಸಹ ಜೊತೆಯಲ್ಲಿ ಉರುಳಿ ಬಂದಿತು.



ಸೇಂಬಿಯನ್‌ಗೆ ಸಂತೋಷದೊಂದಿಗೆ ಆಶ್ಚರ್ಯವು ಆಯಿತು. ಅಪ್ಪನಲ್ಲಿಗೆ ಓಡಿದನು. ಉರುಳುವ ಆ ವಸ್ತುವನ್ನು ಅಚ್ಚರಿಯಿಂದ ನೋಡಿದನು. "ಅಪ್ಪ ಇದು ಏನು?" ಎಂದು ಕೇಳಿದನು.



"ಬೆಟ್ಟದಿಂದ ಕಲ್ಲುಗಳು ಹಾಗೂ ಮರದ ದಿಮ್ಮಿಗಳು ಉರುಳುವುದನ್ನು ಕಂಡೆನು. ಆಗೊಂದು ಉಪಾಯ ಹೊಳೆಯಿತು. ಮರದ ದಿಮ್ಮಿಯನ್ನು ವೃತ್ತಾಕಾರವಾಗಿ ಕಡಿದು ಇದನ್ನು ಮಾಡಿದೆನು. ಹೇಗಿವೆ?" ಎಂದು ಕೇಳಿದರು.



"ತುಂಬಾ ಚೆನ್ನಾಗಿದೆ ಅಪ್ಪಾ" ಎಂದು ಹೆಮ್ಮೆಯಿಂದ ಹೇಳಿದನು. ವಿಶ್ವದಲ್ಲಿಯೇ ನನ್ನ ಅಪ್ಪನ ಹಾಗೆ ಯಾರು ಇಲ್ಲಾ ಎಂದೂ ಹೆಮ್ಮೆ ಪಟ್ಟನು.

ಈ ಕತೆಯಲ್ಲಿ ಬರುವ ಸೇಂಬಿಯನ್‌ನು ಸಾವಿರಾರು ವರ್ಷಗಳ ಹಿಂದೆ ಜೀವಿಸಿದವನು. ಅವನ ತಂದೆಯೇ ಚಕ್ರವನ್ನು ಹೊಂದಿದ ವಾಹನವನ್ನು ಎಳೆದುಕೊಂಡು ಬಂದ ಮಾನವ.





**ಚಕ್ರಗಳ ಸೃಷ್ಟಿಯಿಂದ ಪ್ರಯಾಣ ಸುಲಭವಾಯಿತು.**

ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಯಾವುದಾದರು ಒಂದು ಕಾರಣಕ್ಕಾಗಿ ಹೋಗುವುದಕ್ಕೆ **ಪ್ರಯಾಣ** ಎನ್ನುವರು. ಇಂದು ನಾವು ಪ್ರಪಂಚದ ಎಲ್ಲಾ ಕಡೆ ಪ್ರಯಾಣ ಮಾಡಲು ಹಲವು ವಿಧವಾದ ವಾಹನಗಳು ಉಂಟು. ಅವುಗಳಲ್ಲಿ ವಿಧ ವಿಧವಾದ ಚಕ್ರಗಳನ್ನು ಜೋಡಿಸಲಾಗಿದೆ.







**ನೀನು ಈ ಸ್ಥಳಗಳಿಗೆ ಹೋಗಲು ಯಾವ ವಾಹನಗಳನ್ನು ಉಪಯೋಗಿಸುವೆ ?**




**ನಿನ್ನ ತಾತ, ಅಜ್ಜಿಯು ಇದೇ ಸ್ಥಳಗಳಿಗೆ ಹೋಗಲು ಉಪಯೋಗಿಸಿದ ವಾಹನಗಳು ಯಾವುವು ? ಕೇಳಿ ಬರೆಯಿರಿ.**

**ಚಿಕ್ಕ ವಯಸ್ಸಿನಲ್ಲಿ**

____________________

____________________

____________________

____________________

**ಇಂದು**

____________________

____________________

____________________

____________________

**50 ವರ್ಷಗಳ ಮೊದಲು ಜನರು....**

| ಹೆಚ್ಚು ಉಪಯೋಗಿಸಿದ ವಾಹನಗಳು | ತುಂಬಾ ಅಚ್ಚರಿಯಿಂದ ನೋಡಿದ ವಾಹನಗಳು |
|---|---|
| | |
| | |
| | |

ಪ್ರಯಾಣ ಮಾಡಲು ಹಲವು ವಾಹನಗಳನ್ನು ಉಪಯೋಗಿಸುತ್ತೇವೆ. ಇವುಗಳಲ್ಲಿ

- ಅತಿ ವೇಗವಾಗಿ ಚಲಿಸುವ ವಾಹನ ______________________.
- ಅತಿ ನಿಧಾನವಾಗಿ ಚಲಿಸುವ ವಾಹನ ______________________.
- ನಿನಗೆ ಯಾವ ವಾಹನದಲ್ಲಿ ಪ್ರಯಾಣಿಸಲು ಇಷ್ಟ ? ಏಕೆ?

  ______________________________________________.
- ನಿನ್ನ ಊರಿನಲ್ಲಿ ಇಲ್ಲದೆ ಇರುವ ವಾಹನಗಳು ಯಾವುವು?______________.

ಪ್ರಯಾಣದಲ್ಲಿ ಹಲವು ಬಗೆಗಳಿವೆ.



ಪ್ರವಾಸ



ತೀರ್ಥಯಾತ್ರೆ





ವ್ಯಾಸಂಗ ಮತ್ತು ಉದ್ಯೋಗ ಮಾಡಲು



ಸಂಬಂಧಿಗಳು ಮತ್ತು ಸ್ನೇಹಿತರನ್ನು ಭೇಟಿ ಮಾಡಲು ಹೋಗುವುದು.

## ಸಂಚಾರವು ನಾಲ್ಕು ಮಾರ್ಗದಲ್ಲಿ ನಡೆಯುತ್ತದೆ.













## ಈ ಮಾರ್ಗದಲ್ಲಿ ಯಾವ ವಾಹನಗಳು ಚಲಿಸುತ್ತವೆ ?

| ಮಾರ್ಗಗಳು | ವಾಹನಗಳು |
|---|---|
| ರಸ್ತೆ ಮಾರ್ಗ | |
| ಕಂಬಿಗಳ ಮೇಲೆ | |
| ಜಲ ಮಾರ್ಗ | |
| ವಾಯು ಮಾರ್ಗ | |



## ರಸ್ತೆ ಮಾರ್ಗ :

ಪ್ರಪಂಚದಲ್ಲಿರುವ ಹಲವು ಭಾಗಗಳನ್ನು ರಸ್ತೆಗಳು ಜೋಡಿಸುತ್ತವೆ. ಜನರು ಪ್ರಯಾಣ ಮಾಡಲು, ವಸ್ತುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತೆಗೆದು ಕೊಂಡು ಹೋಗಲು ಸಹಕಾರಿಯಾಗಿದೆ. ದಿನನಿತ್ಯ ಪ್ರಯಾಣ ಮಾಡಲು ಜನರು ರಸ್ತೆ ಮಾರ್ಗವನ್ನು ಹೆಚ್ಚು ಅವಲಂಬಿಸುತ್ತಾರೆ.

## ರೈಲು ಮಾರ್ಗ (ಕಂಬಿಗಳ ಮಾರ್ಗ) :



ನೀನು ರೈಲಿನಲ್ಲಿ ಪ್ರಯಾಣ ಮಾಡಿರುವೆಯಾ ? ಯಾವ ಊರಿಗೆ ಹೋಗಿರುವೆ ? ರೈಲು ಗಾಡಿಯು ರೈಲು ಕಂಬಿಯ ಮೇಲೆ ಚಲಿಸುತ್ತದೆ.ಹೆಚ್ಚು ದೂರ ಪ್ರಯಾಣ ಮಾಡಲು ರೈಲು ಗಾಡಿ ಸೂಕ್ತವಾಗಿದೆ. ನಮ್ಮ ದೇಶ, ಪ್ರಪಂಚದಲ್ಲಿಯೇ ಅತೀ ಉದ್ದವಾದ ರೈಲು ಹಳಿಗಳನ್ನು ಹೊಂದಿದೆ.

## ಜಲಮಾರ್ಗ :

ನಿಮ್ಮ ಊರಿನಲ್ಲಿ ಜಲಮಾರ್ಗ ಇರುವುದೇ? ಹಡಗು, ದೋಣಿ, ತೆಪ್ಪ, ಮೋಟರ್ ದೋಣಿ ಇವುಗಳು ಜಲ ಮಾರ್ಗದ ವಾಹನಗಳಾಗಿವೆ. ಕಾಲುವೆಗಳು, ನದಿಗಳು, ಸಮುದ್ರದ ಮಾರ್ಗವಾಗಿ ಜಲ ಸಂಚಾರ ನಡೆಯುವುದು. ಸಮುದ್ರವನ್ನು ದಾಟಿ ಇತರ ದೇಶಗಳಿಗೆ ಪ್ರಯಾಣ ಮಾಡಲು, ಘನವಾದ ವಸ್ತುಗಳನ್ನು ಸಾಗಿಸಲು ಜಲಮಾರ್ಗ ಸಂಚಾರ ಸಹಾಯವಾಗಿದೆ.





## ವಾಯು ಮಾರ್ಗ :

ಅತಿ ಕಡಿಮೆ ಅವಧಿಯಲ್ಲಿ ಹೆಚ್ಚುದೂರ ಪ್ರಯಾಣ ಮಾಡಬಹುದು. ಅತಿ ಬೇಗನೆ ತಲುಪಬಹುದು. ಬೇರೆ ಸಾರಿಗೆಗಿಂತ ಖರ್ಚು ಅಧಿಕ. ವಿಮಾನಗಳು ಗಾತ್ರದಲ್ಲಿ ದೊಡ್ಡದು, ಹೆಲಿಕ್ಯಾಪ್ಟರ್ ಗಾತ್ರದಲ್ಲಿ ಚಿಕ್ಕದು. ಕ್ಷಾಮ ಮತ್ತು ಪ್ರವಾಹ ಬಂದಾಗ ಆಹಾರ ಮತ್ತು ವಸ್ತ್ರಗಳನ್ನು ಜನರಿಗೆ ತಲುಪಿಸಲು ಸಹಾಯಕವಾಗುತ್ತದೆ. ವಿಮಾನಗಳು ಹೋಗಲು ಸಾಧ್ಯವಿಲ್ಲದ ಸ್ಥಳಗಳಿಗೆ ಹೆಲಿಕ್ಯಾಪ್ಟರ್‌ಗಳನ್ನು ಬಳಸಲಾಗುವುದು.





ನೀನು ಎರಡು ದಿನ ಪ್ರವಾಸ ಹೋಗುವಾಗ ಯಾವ ವಸ್ತುಗಳನ್ನು ತೆಗೆದುಕೊಂಡು ಹೋಗುವೆ?



__________ __________

__________ __________

__________ __________ __________













ಪ್ರವಾಸ ಹೋಗುವಾಗ ಯಾವ ಆಹಾರ ಪದಾರ್ಥಗಳನ್ನು ತೆಗೆದುಕೊಂಡು ಹೋಗಲು ಇಷ್ಟ ಪಡುವೆ ? ಏಕೆ?





____________________

____________________

____________________

____________________
















**ಕಂಡುಹಿಡಿ....**

- ವಾಹನಗಳನ್ನು ಅವುಗಳ ವೇಗದ ಆಧಾರದ ಮೇಲೆ 1,2 ಎಂದು ಕ್ರಮವಾಗಿ ಬರೆ.
- ಒಂದೊಂದು ವಾಹನದಲ್ಲೂ ಎಷ್ಟೆಷ್ಟು ಜನರು ಪ್ರಯಾಣಿಸಬಹುದು ಎಂದು ವಿಂಗಡಿಸು.
- ಪೆಟ್ರೋಲ್, ಡೀಸಲ್‌ನಂತಹುಗಳಿಲ್ಲದೆ ಚಲಿಸುವ ವಾಹನಗಳಿಗೆ ಬಣ್ಣ ಹಚ್ಚು.


















_______ ಜನರು ಪ್ರಯಾಣಿಸಬಹುದು.







- ಒಂದೇ ಸಮಯದಲ್ಲಿ ನೂರಕ್ಕೂ ಹೆಚ್ಚು ಜನರು ಪ್ರಯಾಣ ಮಾಡಲು ಬಳಸುವ ವಾಹನಗಳು ಯಾವುವು?
- ಕಡಿಮೆ ದೂರ ಹೋಗಲು ನೀನು ಯಾವ ವಾಹನವನ್ನು ಬಳಸುವೆ ?
- ಅತೀ ದೂರವನ್ನು ತಲುಪಲು, ಕಡಿಮೆ ಖರ್ಚಿನಲ್ಲಿ ಹೋಗಲು ಯಾವ ವಾಹನವನ್ನು ಆಯ್ಕೆ ಮಾಡುವೇ ?
- ಚೆನ್ನೈಯಿಂದ ವಾಣಿ, ರಾಣಿ, ಪಂದ್ಯಗಳಲ್ಲಿ ಭಾಗವಹಿಸಲು ಡೆಲ್ಲಿಗೆ ಹೋದರು . ಇಬ್ಬರು ಎರಡು ದಿನ ಪ್ರಯಾಣ ಮಾಡಿ ಡೆಲ್ಲಿ ಸೇರಿದರು. ಹಾಗಾದರೆ ಈ ಇಬ್ಬರು ಯಾವ ವಾಹನದಲ್ಲಿ ಪ್ರಯಾಣ ಮಾಡಿದರು?
- ಪರಿಸರ ಮಾಲಿನ್ಯವಾಗದಂತೆ ಚಲಿಸುವ ವಾಹನ ಯಾವುದು ?
- ನಿಮ್ಮ ಶಾಲೆಯಿಂದ ಪ್ರವಾಸ ಹೋಗುವುದಾಗಿ ಇಟ್ಟುಕೊಳ್ಳಿ. ಹೇಗೆ ಯೋಜನೆ ಹಾಕಿಕೊಳ್ಳುವಿರಿ ? ಯಾವ ಸ್ಥಳ ? ಏನನ್ನು ನೋಡುವಿರಿ?

ಎಷ್ಟು ವಿದ್ಯಾರ್ಥಿಗಳು ?

ಎಷ್ಟು ದಿನ ?

ಯಾವ ವಾಹನ ?



**ಶಿಕ್ಷಕರಿಗೆ,**

ವಿದ್ಯಾರ್ಥಿಗಳನ್ನು ಗುಂಪಾಗಿ ವಿಂಗಡಿಸಿ ಈ ವೇಳಾಪಟ್ಟಿ ಬಳಸಿ. ನಮ್ಮ ಪರಿಸರ ಮಾಲಿನ್ಯವಾಗದಂತೆ ಪ್ರಯಾಣ ಮಾಡಲು ನಾವು ಏನೇನು ಮಾಡಬೇಕು ಎನ್ನುವುದನ್ನು ಚರ್ಚಿಸಲು ಸಹಾಯ ಮಾಡಬೇಕು.

ಬೆಟ್ಟ ಪ್ರದೇಶಗಳಲ್ಲಿ ಉಪಯೋಗವಾಗುವ ವಾಹನಗಳು.



ಜನರು ಸಂಚರಿಸಲು ಉಪಯೋಗವಾಗಿರುವ ಮತ್ತು ಜನರ ತುರ್ತು ಸಂದರ್ಭಗಳಲ್ಲಿ ಉಪಯುಕ್ತವಾಗುವ ವಾಹನಗಳು ಉಂಟು. ಅವುಗಳು....




ಪೋಲೀಸ್ ವಾಹನ



ಅಗ್ನಿ ಶಾಮಕ ವಾಹನ



ಅಂಬ್ಯುಲೆನ್ಸ್ (108)

ಸಾರ್ವಜನಿಕರ ಇತರ ಕೆಲಸಗಳಿಗೆ ಉಪಯುಕ್ತವಾಗುವ ವಾಹನಗಳು .

ವಸ್ತುಗಳನ್ನು ತೆಗೆದುಕೊಂಡು ಹೋಗಲು, ಇತರ ಕೆಲಸಗಳಿಗೆ ಸಹಾಯವಾಗಿರುವುವು.













ನೀನು ರಜಾ ದಿನಗಳನ್ನು ಕಳೆಯಲು, ಪ್ರವಾಸಕ್ಕೆ ಬೇರೆ ಊರಿನ ನೆಂಟರ ಮನೆಗೆ ಹಬ್ಬ ಮತ್ತು ಜಾತ್ರೆಗಳಿಗೆ ಹೋಗಿ ಬಂದೆಯಾ ? ಹಾಗಾದರೆ ಯಾವ ವಾಹನಗಳಲ್ಲಿ ಹೋದೆ ? ನಿನ್ನ ಪ್ರಯಾಣದ ಅನುಭವನ್ನು ತಿಳಿಸು.



## ರೈಲು ಬಂಡಿಯನ್ನು ಮಾಡೋಣವೇ . . .



















## ಓದಿ ಆನಂದಿಸಿ....

ಮೀನಾ ತುಂಬಾ ಸಂತೋಷದಲ್ಲಿ ಇದ್ದಳು. ಕಾರಣ ಅಂದು ಊರಿನಿಂದ ಅವಳ ಮಾವ ಬರುತ್ತಿದ್ದರು. ಮಾವನ ಹೆಸರು ಶೇಖರ್. ಅವರು ಭಾರತದ ಎಲ್ಲಾ ಭಾಗಗಳನ್ನು ಪ್ರವಾಸ ಮಾಡಿ ಹಿಂತುರುಗಿ ಬರುತ್ತಿದ್ದಾರೆ.



ಅವರು ತಾವು ನೋಡಿದ ಸ್ಥಳಗಳನ್ನು ಛಾಯ ಚಿತ್ರಗಳ ಮೂಲಕ ಸೆರೆಯಿಡಿದು ತಂದಿದ್ದಾರೆ. ಅವರೊಡನೆ ಛಾಯ ಚಿತ್ರಗಳನ್ನು ನೋಡೋಣವೇ...

**ಮಾವ ಶೇಖರನ ವಿವರಣೆ**

ಭಾರತದ ದಕ್ಷಿಣ ಪೂರ್ವ ಭಾಗದ ಸಮುದ್ರ ಹಂಚಿನಲ್ಲಿರುವ ಗ್ರಾಮ ಧನುಷ್‌ಕೋಟಿ. ಅಲ್ಲಿಂದ ನಾನು ದೊಡ್ಡ ಪಟ್ಟಣಕ್ಕೆ **ಜೀಪಿನಲ್ಲಿ** ಹೋಗುವಾಗ, ಹಲವು ಮೀನುಗಾರರ ಗ್ರಾಮಗಳು, ಪಣಮರಗಳನ್ನು ನೋಡಿದೆನು.



ಚೆನ್ನೈಗೆ ರಾಮೇಶ್ವರದಿಂದ **ರೈಲು ಗಾಡಿ**ಯಲ್ಲಿ ಹೋದೆನು. ಸಮುದ್ರದ ಮೇಲೆ ಕಟ್ಟಿರುವ ಪಾಂಬನ್ ಸೇತುವೆಯ ಮೇಲೆ ರೈಲಿನಲ್ಲಿ ಪ್ರಯಾಣಿಸಿದ್ದು, ತುಂಬಾ ಸಂತೋಷವಾಗಿತ್ತು.



ಚೆನ್ನೈಯಿಂದ ನನ್ನ ಸ್ನೇಹಿತರೊಡನೆ **ಮೋಟಾರ್ ಬೈಕ್**ನಲ್ಲಿ ಮಾಮಲ್ಲಪುರಂ ತಲುಪಿದೆನು. ಅಲ್ಲಿ ಸಮುದ್ರ ತೀರದಲ್ಲಿರುವ ದೇವಸ್ಥಾನ ಮತ್ತು ರಥದ ದೇವಸ್ಥಾನಗಳನ್ನು ನೋಡಿ ಆಶ್ಚರ್ಯವಾಯಿತು.







ಚೆನ್ನೈಯಿಂದ ಟೂರೀಸ್ಟ್ **ಬಸ್ಸಿನ** ಮೂಲಕ ಒಡಿಸ್ಸಾ ರಾಜ್ಯ ತಲುಪಿದೆ. ಅಲ್ಲಿ ಕೋನಾರ್ಕನಲ್ಲಿರುವ ಸೂರ್ಯ ದೇವಸ್ಥಾನವನ್ನು ನೋಡಿದೆ.



ನಂತರ ಅಲ್ಲಿಂದ **ವಿಮಾನದ** ಮೂಲಕ ಅಸ್ಸಾಂನಲ್ಲಿರುವ ಗುವಾಹಟ್ಟಿ ತಲುಪಿದೆ. ಇದು ಭಾರತದ ಉತ್ತರದ ಪಶ್ಚಿಮದಲ್ಲಿದೆ. ಅಲ್ಲಿ ರಜಿರಂಗಾ ಜೀವಿಗಳ ಸಂರಕ್ಷಣಾಲಯವನ್ನು ನೋಡಿದೆ.



ಅಲ್ಲಿಂದ **ಹೆಲಿಕ್ಯಾಪ್ಟರ್** ಮೂಲಕ ಮೇಘಾಲಯ ರಾಜ್ಯದ ರಾಜ್ಯಧಾನಿಯಾದ ಶಿಲಾಂಗ್ ತಲುಪಿದೆ. ಅಲ್ಲಿ ಎಲಿಫೆಂಟಾ ಜಲಪಾತವನ್ನು ನೋಡಿದೆ. ಕಾಶ್ಮೀರ ರಾಜ್ಯಧಾನಿ ಶ್ರೀನಗರದಲ್ಲಿರುವ ಥಾರ್ ಸರೋವರದಲ್ಲಿ **ಹಡಗು ಸವಾರಿ** ಮಾಡಿದೆ.





ನಂತರ ಅಲ್ಲಿಂದ ರಾಜಾಸ್ಥಾನದಲ್ಲಿರುವ ಜೈಪುರ ನಗರವನ್ನು ತಲುಪಿದೆ. ಅಲ್ಲಿ **ಒಂಟೆ ಸವಾರಿ** ಮಾಡಿದೆ.



ಮಹಾರಾಷ್ಟ್ರದಲ್ಲಿರುವ ಮುಂಬೈ ನಗರ ತಲುಪಿ, ಅಲ್ಲಿ ಆನೆ ಗುಂದಿಗೆ **ಹಡಗಿನಲ್ಲಿ** ತಲುಪಿದೆ.



ಇಲ್ಲಿಂದ **ಕಾರಿನಲ್ಲಿ** ಉತ್ತರ ಸಮುದ್ರ ಕಡೆಯಿಂದ ಕೇರಳ ತಲುಪಿದೆ. ನಂತರ ಪಾಲಕಾಡು ಮಾರ್ಗವಾಗಿ ಕೊಯಮತ್ತೂರಿಗೆ ಬಂದೆನು.

"ಆಹಾ! ಎಂತರ ಸುಂದರವಾದ ಪ್ರಯಾಣ" ಎಂದಳು ಮೀನಾ. "ನಾನು ನಿಮ್ಮ ಶಾಲೆಗೆ **ಆಟೋ**ದಲ್ಲಿ ಬಂದೆ. ನಾನು ಹಲವು ವಾಹನಗಳಲ್ಲಿ ಪ್ರಯಾಣ ಮಾಡಿ ಬಂದಿರುವೆ" ಎಂದರು ಮೀನಾಳ ಮಾವ.





ಮೀನಾ ಎದೆ ತುಂಬಿ, ಸಂತೋಷಪಟ್ಟು ಎಲ್ಲಾ ಫೋಟೋಗಳನ್ನು ನೋಡಿ, ನಂತರ ಮುಚ್ಚಿಟ್ಟಳು.







# 2. ಆಹಾರದ ಕಥೆ





ಇವರ ಮುಖ ಏಕೆ ಹೀಗೆ ಇದೆ? ಇವರು ಏನು ಸೇವಿಸಿದರು ? ಕಂಡು ಹಿಡಿಯಿರಿ. ಅದರೊಂದಿಗೆ ಜೋಡಿಸಿ.

ಇವುಗಳ ವಾಸನೆ ಹೇಗೆ ಇದೆ ?















ಇವುಗಳನ್ನು ಸೇವಿಸಿದ ತಕ್ಷಣ ನೀವು ಯಾವ ಶಬ್ದ ಮಾಡುವಿರಿ?
ನಿಮ್ಮ ಮುಖ ಹೇಗೆ ಬದಲಾಗುತ್ತದೆ? ನಟಿಸಿ ತೋರಿಸಿ.





## ನಾವು ಸೇವಿಸುವ ಆಹಾರ ತಯಾರಾದ ಕಥೆ

ಆದಿ ಮಾನವರು ಆಹಾರಕ್ಕಾಗಿ ಬೇಟೆಯಾಡಿದರು. ಬೇಟೆಯಾಡಿದ ಆಹಾರ ಪದಾರ್ಥಗಳನ್ನು ಶೇಖರಣೆ ಮಾಡಲು ಪ್ರಾರಂಭಿಸಿದರು. ನಂತರ ಪ್ರಕೃತಿಯನ್ನು ಅನುಸರಿಸಿ ಬೆಳೆ ಬೆಳೆಯುವುದನ್ನು ಕಲಿತು ಕೊಂಡರು. ಧಾನ್ಯಗಳನ್ನು ಶೇಖರಿಸಿ ಬಿತ್ತನೆ ಮಾಡಲು ಪ್ರಾರಂಭಿಸಿದರು. ಆಹಾರ ಬೆಳೆಗಳನ್ನು ಬೆಳೆಯಲು ನದಿ ತೀರಗಳಲ್ಲಿಯೂ, ನೀರು ಇರುವ ಸ್ಥಳಗಳ ಪಕ್ಕದಲ್ಲಿ ವಾಸಿಸಿದರು. ಈ ರೀತಿಯಾಗಿ ವ್ಯವಸಾಯದ ಕಸುಬು ಪ್ರಾರಂಭವಾಯಿತು.







ನಿನಗೆ ತುಂಬಾ ಇಷ್ಟವಾದ ಆಹಾರ ಬಗೆಗಳು ಯಾವುವು?



ನಿನ್ನ ಸ್ನೇಹಿತರಿಗೆ ಇಷ್ಟವಾದ ಆಹಾರ ಪದಾರ್ಥಗಳು ಯಾವುವು?



- ನಿನಗೆ ಒಂದೇ ರೀತಿಯಾದ ಆಹಾರ ಸೇವಿಸಲು ಇಷ್ಟನಾ ಅಥವಾ ಬೇರೆ ಬೇರೆ ಆಹಾರ ತಿನ್ನಲು ಇಷ್ಟನಾ? ____________________
- ನೀನು ಪ್ರತಿದಿನ ಸೇವಿಸುವ ಆಹಾರ ಯಾವುವು? ____________________
- ಇಂದು ಬೆಳಗ್ಗೆ ನೀನು ಸೇವಿಸಿದ ಆಹಾರ ಯಾವುದು ?____________________.
- ಈದಿನ ಬೆಳಗ್ಗೆ ನೀನು ಮತ್ತು ನಿನ್ನ ಗೆಳೆಯನು ಸೇವಿಸಿದ ಆಹಾರ ಯಾವ ಯಾವ ಪದಾರ್ಥಗಳನ್ನು ಹಾಕಿ ಮಾಡಲಾಗಿತ್ತು? ನಿನ್ನ ಗೆಳೆಯನೊಂದಿಗೆ ಸೇರಿ ಚರ್ಚಿಸಿ ಬರೆ.

____________________________________________

____________________________________________

____________________________________________

ನಾವು ಸೇವಿಸುವ ಬಹುತೇಕ ಆಹಾರ ಪದಾರ್ಥಗಳು ಅಕ್ಕಿಯಿಂದ ಮಾಡಿರುತ್ತಾರೆ. ಅಕ್ಕಿಯು ತಮಿಳರ ಮೂಲ ಆಹಾರ ಧಾನ್ಯಗಳಲ್ಲಿ ಒಂದು. ಭಾರತದಲ್ಲಿ ಬಹುತೇಕ ಜನರು ದಿನ ನಿತ್ಯ ಬಳಸುವ ಆಹಾರ ಪದಾರ್ಥ ಅಕ್ಕಿಯೇ ಆಗಿದೆ.



## ಭತ್ತ ಹೇಳುವ ಕಥೆ

### ನಾನು ಯಾರು ಗೊತ್ತೆ?



ನಾನು,ನೀವು ಇಷ್ಟ ಪಟ್ಟು ಸೇವಿಸುವ ಅಕ್ಕಿಯನ್ನು ನೀಡುವ ಭತ್ತ. ನಾನು ಬೆಳೆಯಲು ಫಲವತ್ತಾದ ಮಣ್ಣು, ಹೆಚ್ಚು ಮಳೆ ಮತ್ತು ಮಿತವಾದ ಉಷ್ಣತೆ ಅವಶ್ಯಕ. ಮಳೆ ಕಡಿಮೆ ಬೀಳುವ ಪ್ರದೇಶಗಳಲ್ಲಿ ನೀರನ್ನು ಕಾಲುವೆಗಳ ಮೂಲಕ ಹಾಯಿಸಿ ನನ್ನನ್ನು ಬೆಳೆಯುತ್ತಾರೆ.

ಭೂಮಿಯನ್ನು ಉತ್ತು, ಹಸನು ಮಾಡಿ ಬಿತ್ತನೆ ಮಾಡುತ್ತಾರೆ. ಅಧಿಕವಾಗಿ ಬೆಳೆದಿರುವ ಪೈರುಗಳನ್ನು ಕಿತ್ತು, ಕಡಿಮೆ ಪೈರುಗಳಿರುವ ಕಡೆಗೆ ನಾಟಿ ಮಾಡುವವರು. 30 ದಿನಗಳಿಂದ 50 ದಿನಗಳವರೆಗೆ ಪಟ್ಟು ಹಾಕಿ ನಾಟಿ ಮಾಡುವರು. ಕಳೆಗಳನ್ನು ಕೀಳುವರು.

ಪೈರಿಗೆ ಅವಶ್ಯಕವಿದ್ದಾಗ ನೀರನ್ನು ಹಾಯಿಸುವರು. ತೆನೆ ಚೆನ್ನಾಗಿ ಬಂದ ಮೇಲೆ ಕುಯ್ಯುವರು. ಅನಂತರ ಒಕ್ಕಣೆ ಮಾಡಿ ಭತ್ತವನ್ನು ಬೇರ್ಪಡಿಸುವರು. ಭತ್ತದ ಕಾರ್ಖಾನೆಯಲ್ಲಿ ಅಕ್ಕಿಯನ್ನು ಮಾಡುವರು.














ಅನಂತರ ಸಂತೆಗೆ ತೆಗೆದು ಕೊಂಡು ಹೋಗುವರು. ಅಲ್ಲಿಂದ ನಿಮ್ಮ ಮನೆಗೆ ಬಂದು ಸೇರುವೆನು. ನಿಮಗೆ ಇಷ್ಟವಾದ ಹಲವು ಬಗೆಯ ಆಹಾರವಾಗಿ ಮಾರ್ಪಡುವೆನು. ನೀವು ನನ್ನನ್ನು ಬಗೆ ಬಗೆಯಾಗಿ ಅಡುಗೆ ಮಾಡಿ, ಊಟ ಮಾಡಿ ಆನಂದಿಸುವಿರಿ.



ನಿನ್ನ ಶಿಕ್ಷಕರ ಸಹಾಯದಿಂದ ಚಿತ್ರವನ್ನು ನೋಡಿ, ಕಬ್ಬಿನಿಂದ ಸಕ್ಕರೆಯನ್ನು ಹೇಗೆ ತಯಾರಿಸುವರು ಎನ್ನವುದನ್ನು ಚರ್ಚಿಸಿ.

## ಸಕ್ಕರೆಯ ಕಥೆಯನ್ನು ಹೇಳು















ಒಂದು ಸ್ಥಳದಲ್ಲಿ ಮಣ್ಣಿನ ಫಲವತ್ತತೆ ಮತ್ತು ಹವಾಮಾನಕ್ಕೆ ಅನುಗುಣವಾಗಿ ಬೆಳೆಗಳು ಬೆಳೆಯುತ್ತವೆ. ಅದೇ ಆ ಪ್ರದೇಶದಲ್ಲಿ ವಾಸಿಸುವ ಬಹುತೇಕ ಜನರು ಆಹಾರವಾಗಿ ಉಪಯೋಗಿಸುವರು. ಗೋಧಿ, ಕಂಬು, ಜೋಳ, ಸಾಮೆ, ನವಣೆ, ಆರಂಗ ಮತ್ತು ರಾಗಿ ಮುಂತಾದವು ಧಾನ್ಯಗಳ ಬಗೆಗಳು. ಇವುಗಳನ್ನು ಉಪಯೋಗಿಸಿ ನಾವು ಪೌಷ್ಟಿಕ ಆಹಾರ ಪದಾರ್ಥಗಳನ್ನು ಬಗೆ ಬಗೆಯಾಗಿ ತಯಾರಿಸುತ್ತೇವೆ.

## ಒಂದು ಧಾನ್ಯ.... ಹಲವು ಆಹಾರ....










## ಹಲವು ಧಾನ್ಯಗಳು.... ಒಂದು ಆಹಾರ....



ಪೌಷ್ಟಿಕ ಆಹಾರ ಎನ್ನುವು ಧಾನ್ಯಗಳು ಮತ್ತು ಬೆಳೆಗಳಂದ ಕೂಡಿರುತ್ತದೆ. ಇದನ್ನು ಬಳಸಿ ತಯಾರಿಸುವ ಹಿಟ್ಟು ಮತ್ತು ಗಂಜಿಯನ್ನು ಬೆಳಗಿನ ಆಹಾರವಾಗಿ ಸೇವಿಸಿದರೆ ಶರೀರ ಆರೋಗ್ಯವಾಗಿ ಚೆನ್ನಾಗಿ ಇರುತ್ತದೆ.

ಶಕ್ತಿಯುತವಾದ ಹಿಟ್ಟು ತಯಾರಿಸಲು ಉಪಯೋಗಿಸುವ ಪದಾರ್ಥಗಳ ಹೆಸರುಗಳನ್ನು ಹಿರಿಯರಿಂದ ಕೇಳಿ ಬರೆ.



**ಈ ಬೇಳೆಗಳಲ್ಲಿ ತಯಾರಿಸುವ ಆಹಾರ ಪದಾರ್ಥಗಳಲ್ಲಿ ಕೆಲವನ್ನು ನಿನ್ನ ಪೋಷಕರಿಂದ ಕೇಳಿ ಬರೆ.**

ನಮ್ಮ ದಿನ ನಿತ್ಯದ ಆಹಾರದಲ್ಲಿ ಹಲವು ವಿಧವಾದ ಬೇಳೆಗಳನ್ನು ಸೇರಿಸಿ ಕೊಳ್ಳುತ್ತೇವೆ. ಇದರಿಂದ ನಮ್ಮ ಶರೀರಕ್ಕೆ ಅವಶ್ಯಕವಾದ ಪೌಷ್ಟಿಕಾಂಶ ಸಿಗುತ್ತದೆ.

ಉದ್ದಿನಬೇಳೆ



ಹೆಸರು ಬೇಳೆ



ಹೆಸರು ಕಾಳು



ಕಡಲೇ ಬೇಳೆ



ತೊಗರಿ ಬೇಳೆ



## ಸೊಪ್ಪೋ.... ಸೊಪ್ಪು.

ಹಲವು ವರ್ಷಗಳ ಹಿಂದೆಯಿಂದಲೇ ನಮ್ಮ ದೇಶದಲ್ಲಿ ಸೊಪ್ಪುಗಳನ್ನು ಆಹಾರದೊಂದಿಗೆ ಸೇವಿಸುವ ಅಭ್ಯಾಸ ಇದೆ. ಈ ಸೊಪ್ಪುಗಳಲ್ಲಿ ಪೌಷ್ಟಿಕಾಂಶ, ಕಬ್ಬಿಣದ ಅಂಶ, ಮತ್ತು ಜೀವ ಸತ್ವಗಳು ಇವೆ. ಪ್ರತಿದಿನವೂ ನಮ್ಮ ಆಹಾರದಲ್ಲಿ ಯಾವುದಾದರೂ ಒಂದು ಸೊಪ್ಪನ್ನು ಸೇರಿಸಿ ಊಟ ಮಾಡಬೇಕು.



ಸೊಪ್ಪನ್ನು ಉಪಯೋಗಿಸಿ ಎಷ್ಟು ವಿಧವಾದ ಆಹಾರವನ್ನು ತಯಾರಿಸಬಹುದು ?

___________________________________________

ನಿನ್ನ ಸುತ್ತ-ಮುತ್ತಲಲ್ಲಿ ಬೆಳೆಯುವ ಸೊಪ್ಪಿನ ಬಗೆಗಳು ಯಾವುವು ?

___________________________________________

___________________________________________

## ಆಹಾರವೇ ಔಷಧಿ....

ಆಹಾರ ತಯಾರಿಸಲು ಕೆಳಗೆ ಕಾಣುವ ಕೆಲವು ಪದಾರ್ಥಗಳನ್ನು ನಾವು ದಿನನಿತ್ಯವು ಉಪಯೋಗಿಸುತ್ತೇವೆ. ಇವುಗಳೆಲ್ಲಾ ನಿಸರ್ಗದತ್ತವಾದ ಔಷಧಿಯ ಗುಣಗಳನ್ನು ಹೊಂದಿರುವವು.

| ಸಾಸಿವೆ | ಜೀರಿಗೆ | ಕರಿಬೇವಿನಸೊಪ್ಪು | ಬೆಳ್ಳುಳ್ಳಿ | ಮೆಣಸಿನಕಾಯಿ |
|---|---|---|---|---|
|  |  |  |  |  |
| ಅರಸಿಣ | ಇಂಗು | ಮೆಣಸು | ದನಿಯ | ಶುಂಠಿ |
|  |  |  |  |  |

ಹಲ್ಲುನೋವು, ಕೆಮ್ಮು, ಬೇಧಿ ಮತ್ತು ಹೊಟ್ಟೆನೋವು ಆದಾಗ ನಿನ್ನ ಅಮ್ಮ ಅಥವಾ ಅಜ್ಜಿ ಏನೇನು ಔಷಧಿಗಳನ್ನು ನಿನಗೆ ಕೊಡುತ್ತಾರೆ ?



## ಮುತ್ತಿನಂತ ಆಹಾರ! ಶಕ್ತಿಯುತ ಆಹಾರ!

ನಾವು ಪ್ರತಿನಿತ್ಯ ಕೆಲಸಗಳನ್ನು ಮಾಡಲು ನಮಗೆ ಶಕ್ತಿ ಅವಶ್ಯಕ. ಅದು ಆಹಾರದ ಮೂಲಕ ನಮ್ಮ ಶರೀರಕ್ಕೆ ಸಿಗುತ್ತದೆ. ಆಹಾರವು ನಮ್ಮ ಶರೀರದ ಬೆಳವಣಿಗೆಗೆ ಉಪಯೋಗವಾಗುತ್ತದೆ. ಇದಲ್ಲದೆ ಬಲವನ್ನು, ಆರೋಗ್ಯವನ್ನು ನೀಡುವುದು .ಆದ್ದರಿಂದ ನಾವು ಪೌಷ್ಟಿಕ ಆಹಾರವನ್ನು ಸೇವಿಸಬೇಕು.



ಮಕ್ಕಳಿಂದ ಹಿರಿಯರವರೆಗೆ ಅವರವರ ಶರೀರಕ್ಕೆ ತಕ್ಕಂತೆ ಆಹಾರದ ಬಗೆಗಳು ವ್ಯತ್ಯಾಸವಾಗಿರುತ್ತವೆ. ಅವರವರ ಶರೀರಕ್ಕೆ ಯಾವ ಆಹಾರ ಹೊಂದಿ ಕೊಳ್ಳುವುದೊ ಅದನ್ನು ತಿಳಿದು ಸೇವಿಸಬೇಕು.

ಹುಟ್ಟಿದ ಮಕ್ಕಳಿಂದ ಹಿರಿಯರವರಿಗೆ ಎಲ್ಲರೂ ಕುಡಿಯುವ ಶಕ್ತಿಯುತವಾದ ಆಹಾರ ಹಾಲು.

ಚಿಕ್ಕ ಮಕ್ಕಳು , ಹಲ್ಲುಗಳಿಲ್ಲದ ವಯಸ್ಸಾದವರು ಎಂತಹ ಆಹಾರವನ್ನು ಸೇವಿಸುವರು ?ಏಕೆ?

## ಆಹಾರ ಬರುವ ದಾರಿ . . . . .

ಹಲವಾರು ಸ್ಥಳಗಳಿಂದ ಆಹಾರ ಪದಾರ್ಥಗಳು ನಮ್ಮನ್ನು ಹೇಗೆ ಬಂದು ಸೇರುವುವು ಎನ್ನುವುದನ್ನು ನೋಡೋಣವೇ? ಅದನ್ನು ಪ್ರತಿಬಿಂಬಿಸುವ ಚಿತ್ರಗಳು.



ಪಶು ಪಾಲನೆ





ಮೀನು ಹಿಡಿಯುವುದು





ವ್ಯವಸಾಯ





ಕೋಳಿಪಾಲನೆ (ಸಾಕುವುದು)



















ಭತ್ತ, ಗೋಧಿ ಮಾತ್ರವಲ್ಲದೆ ಆಹಾರಕ್ಕಾಗಿ ಜನರು ಆಡು, ಹಸು ಮತ್ತು ಕೋಳಿ ಮುಂತಾದವುಗಳನ್ನು ಸಾಕುವರು. ಇವುಗಳ ಮೂಲಕ ಮಾಂಸ, ಹಾಲು ಮತ್ತು ಮೊಟ್ಟೆ ಮುಂತಾದುವುಗಳನ್ನು ನಾವು ಪಡೆಯುತ್ತೇವೆ. ಇದರಿಂದ ಪೌಷ್ಟಿಕಾಂಶ ಮತ್ತು ಕೊಬ್ಬಿನ ಅಂಶ ಸಿಗುತ್ತದೆ. ನದಿ, ಹೊಳೆ ಮತ್ತು ಸಮುದ್ರದಲ್ಲಿ ಸಿಗುವ ಮೀನು ನಮಗೆ ಆಹಾರವಾಗಿ ಉಪಯೋಗವಾಗುತ್ತದೆ.

ಇವುಗಳಲ್ಲದೆ ನಮ್ಮ ದೇಶದಲ್ಲಿ ಟೀ ಮತ್ತು ಕಾಫಿಯಂತಹ ತೋಟದ ಬೆಳೆಗಳು, ಮಾವು, ಹಲಸು ಮತ್ತು ಬಾಳೆ ಮುಂತಾದ ಹಣ್ಣಿನ ಮರಗಳನ್ನು ನಮ್ಮ ಆಹಾರಕ್ಕಾಗಿ ಬೆಳೆಸುತ್ತೇವೆ.



ನೀನು ಇಷ್ಟ ಪಡುವ ಆಹಾರ ಪದಾರ್ಥಗಳು... ________________



________________________________________

ನಿನಗೂ ನಿನ್ನ ಗೆಳೆಯನಿಗೂ ಇಷ್ಟವಾದ ಆಹಾರ ಪದಾರ್ಥಗಳು...

________________________________________

ನಿನಗೆ ಇಷ್ಟವಾದ ಆಹಾರ ಪದಾರ್ಥಗಳು ನಿಮ್ಮ ಮನೆಯಲ್ಲಿ ಯಾರು ಯಾರಿಗೆ ಇಷ್ಟ.

________________________________________

ನೀನು ಇಷ್ಟಪಡುವ ಆಹಾರದಲ್ಲಿ ಇಂದಿನವರೆಗೆ ಸೇವಿಸದೆ ಇರುವ ಎರಡು ಆಹಾರ ಪದಾರ್ಥಗಳು

________________________________________



ನಿನಗೆ ಇಷ್ಟವಾಗದ ಆಹಾರ, ಆದರೆ ಪೋಷಕರು ನಿನ್ನ ಶರೀರದ ಬೆಳವಣಿಗೆಗಾಗಿ ತಿನ್ನಲು ಹೇಳುವುದು.

________________________________________



## ಹಿರಿಯರಿಂದ ಕೇಳಿ ವಿಷಯವನ್ನು ಸಂಗ್ರಹಿಸು.

ಪ್ರಾಚೀನ ಕಾಲದಲ್ಲಿ ಮಾಡಿದ ವಿಶೇಷವಾದ ಆಹಾರ ಈಗ ರೂಢಿಯಲ್ಲಿ ಇಲ್ಲದಿರುವುದು...

________________________________________

ಚಿಕ್ಕವಯಸ್ಸಿನಲ್ಲಿ ಅವರು ಇಷ್ಟಪಟ್ಟು ತಿಂದ ತಿಂಡಿ ತಿನಿಸುಗಳು ________________

________________________________________

ಈಗ ಅವರಿಂದ ಸೇವಿಸಲು ಆಗದ ತಿಂಡಿ ತಿನಿಸುಗಳು ________________

________________________________________

ನೋಡದೆ, ಸೇವಿಸದೆ ಅಡುಗೆ ಮಾಡುವಾಗ ವಾಸನೆಯಿಂದ ಕಂಡುಹಿಡಿಯಲು ಸಾಧ್ಯವಾಗುವ ಆಹಾರ ಪದಾರ್ಥಗಳು ಯಾವುವು ಕಂಡು ಹಿಡಿ________________



________________________________________

ಅಡುಗೆ ಮಾಡದೆಯೇ ತಿನ್ನುವಂತಹ ಪದಾರ್ಥಗಳು ಯಾವುವು ?



______________________________

ಆವಿಯಲ್ಲಿ ಬೇಯಿಸಿ ತಿನ್ನವಂತಹ ಪದಾರ್ಥಗಳು ಯಾವುವು ?

______________________________

ಎಣ್ಣೆಯಲ್ಲಿ ಬೇಯಿಸಿ ತಿನ್ನುವಂತಹ ಪದಾರ್ಥಗಳು ಯಾವುವು



______________________________

ಅಪ್ಪಳ, ಸಂಡಿಗೆ ಮುಂತಾದುವುಗಳನ್ನು ಏಕೆ ಬೇಸಿಗೆ ಕಾಲದಲ್ಲಿ ಮಾಡುವರು ?

## ಆಹಾರ ಇದು, ಹಬ್ಬ ಯಾವುದು?

















ನಿಮ್ಮ ಊರಿನಲ್ಲಿ ಆಚರಿಸುವ ಇತರ ಹಬ್ಬಗಳು ಯಾವುವು? ಆ ದಿನಗಳಂದು ನಿಮ್ಮ ಮನೆಯಲ್ಲಿ ತಯಾರು ಮಾಡುವ ಮುಖ್ಯವಾದ ಆಹಾರ ಪದಾರ್ಥಗಳನ್ನು ತಿಳಿಸು.

## ಹಣ್ಣಿನಿಂದ ಪಾನೀಯ ಮಾಡೋಣ?







ನಿಂಬೆ ಹಣ್ಣೊಂದನ್ನು ತೆಗೆದು ಕೋ.

ಅದನ್ನು ಎರಡಾಗಿ ಕತ್ತರಿಸಿ ರಸ ತೆಗೆದುಕೋ,

ಸಕ್ಕರೆಯನ್ನು ಹಾಕು.

ಸ್ವಲ್ಪ ನೀರನ್ನು ಹಾಕಿ ಕಲಕಿ ಕುಡಿ.

ಶಕ್ತಿಯುತವಾದ ಪಾನೀಯ ಇದು.



ಇದರ ಹಾಗೆಯೇ ಇನ್ನೂ ಹಲವಾರು ಹಣ್ಣಿನ ರಸವನ್ನು ತಯಾರಿಸಿ ಆನಂದಿಸು.



ಶಕ್ತಿಯು, ರುಚಿಯು ಇರುವ ಹಣ್ಣಿನ ಮಿಶ್ರಣವನ್ನು ಹಾಗೂ ತರಕಾರಿ ಮಿಶ್ರಣವನ್ನು ತಯಾರಿಸೋಣವೇ? ತಯಾರಿಸುವ ವಿಧಾನವನ್ನು ಬರೆಯಿರಿ.





## ಹಣ್ಣಿನ ಮಿಶ್ರಣ

**ಮಾಡಲು ಬೇಕಾದ ಪದಾರ್ಥಗಳು**

**ಮಾಡುವ ವಿಧಾನ :**





## ತರಕಾರಿ ಮಿಶ್ರಣ

**ಮಾಡಲು ಬೇಕಾದ ಪದಾರ್ಥಗಳು**

**ಮಾಡುವ ವಿಧಾನ :**



# 3. ನಮಗಾಗಿ....















ಈ ಚಿತ್ರದಲ್ಲಿ ಕಾಣುವ ಸ್ಥಳಗಳು ಯಾವುವು ?
















ಅವುಗಳ ಹೆಸರುಗಳನ್ನು ಬರೆಯಿರಿ.

**ಹಿಂದಿನ ಪುಟದಲ್ಲಿರುವ ಚಿತ್ರಗಳನ್ನು ಗಮನಿಸು. ನಂತರ ಕೆಳಗೆ ಕೊಟ್ಟಿರುವ ಸಂದರ್ಭಗಳಲ್ಲಿ ಅವುಗಳಲ್ಲಿ ಯಾವ ಸ್ಥಳಕ್ಕೆ ಹೋಗುವೆ? ಮನೆಯ ಚಿತ್ರದಿಂದ ನೀನು ಎಲ್ಲೆಲ್ಲಿಗೆ ಹೋಗುವೆ ಎನ್ನುವುದನ್ನು ಗೆರೆಹಾಕಿ ತೋರಿಸು.**

- ☛ ನಿಮ್ಮ ಮನೆಯವರಿಗೆ ಆರೋಗ್ಯ ಸರಿಯಲ್ಲದಿದ್ದಾಗ....
- ☛ ಶಿಕ್ಷಣ ಪಡೆಯಲು....
- ☛ ಸೀಮೆಎಣ್ಣೆ, ಸಕ್ಕರೆ ಮುಂತಾದ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ಪಡೆಯಲು....
- ☛ ನಿಮ್ಮ ಮನೆಯಲ್ಲಿ ದ್ವಿಚಕ್ರವಾಹನ ಕಳುವಾದಾಗ....
- ☛ ಹಣ ಉಳಿತಾಯ ಮಾಡಲು ಮತ್ತು ಸಾಲ ಪಡೆಯಲು....
- ☛ ಪತ್ರಗಳನ್ನು ಬೇರೆ ಊರಿಗೆ ಕಳುಹಿಸಲು....
- ☛ ಹೊಸ ಮನೆಗೆ ವಿದ್ಯುತ್ ಸಂಪರ್ಕ ಬೇಕಾದಾಗ....
- ☛ ಮನೆಗೆ ಕುಡಿಯುವ ನೀರಿನ ಸಂಪರ್ಕ ಬೇಕಾದಾಗ....

**ಇವುಗಳು ಎಲ್ಲಾವು ನಮ್ಮ ನಿತ್ಯ ಜೀವನಕ್ಕೆ ಹೆಚ್ಚು ಅವಶ್ಯಕತೆ ಎನ್ನುವುದನ್ನು ತಿಳಿದಿರುವೆಯ....**

ಇವುಗಳಲ್ಲಿ ನಿಮ್ಮ ಮನೆಯಲ್ಲಿರುವ ಎಲ್ಲರ ಅವಶ್ಯಕತೆಗೆ ಸಹಾಯಕವಾಗಿರುವ ಸ್ಥಳಗಳು ಯಾವುವು? ನೀನು ಯಾವ ಸ್ಥಳಕ್ಕೆ ಹೋಗಿರುವೆ? ಏಕೆ?

ಇವುಗಳಲ್ಲಿ ನಿಮ್ಮ ಮನೆಯ ಪಕ್ಕದಲ್ಲಿರುವ ಸ್ಥಳಗಳು ಯಾವುವು (ಎಷ್ಟು ದೂರದಲ್ಲಿವೆ) ದೂರದಲ್ಲಿರುವ ಸ್ಥಳಗಳು ಯಾವುವು? (ವಾಹನದಲ್ಲಿ ಮಾತ್ರ ಹೋಗುವುದು) ✓ ಮಾಡು.

| ಸ್ಥಳಗಳು | ಮನೆಯ ಹತ್ತಿರ | ಮನೆಯಿಂದ ದೂರ | ಹೋಗಲು ಸಹಾಯಕವಾದವು |
|---|---|---|---|
| ಶಾಲೆ | | | |
| ಬ್ಯಾಂಕ್ | | | |
| ಆರೋಗ್ಯ ಕೇಂದ್ರ | | | |
| ಅಂಚೆ ಕಛೇರಿ | | | |
| ಸಾರಿಗೆ ನಿಲ್ದಾಣ | | | |
| ಆರಕ್ಷಕ ಠಾಣೆ | | | |

ಇಂತಹ ಸ್ಥಳಗಳಲ್ಲಿ
ಬಿಳಿ ವಸ್ತುಗಳನ್ನು ಧರಿಸಿ ಕೆಲಸ ಮಾಡುವವರು ಯಾರು? ಯಾರು?
ಖಾಕಿ ವಸ್ತ್ರಗಳನ್ನು ಧರಿಸಿ ಕೆಲಸ ಮಾಡುವವರು ಯಾರು? ಯಾರು?
ನಿಮ್ಮ ಮನೆಯ ಹತ್ತಿರವಿರುವವರುಗಳು ಯಾವ ಯಾವ ಕೆಲಸ ಮಾಡುತ್ತಾರೆ ?
ನೀನು ದೊಡ್ಡವನಾಗಿ ಕೆಲಸಕ್ಕೆ ಹೋಗುವಾಗ ಯಾವ ಕೆಲಸವನ್ನು ಆಯ್ಕೆ ಮಾಡಿಕೊಳ್ಳುವೆ? ಏಕೆ?

## ಅಂಚೆ ಕಛೇರಿ




ಮಾಜಿ ರಾಷ್ಟ್ರಪತಿ ಶ್ರೀಯುತ ಎ.ಪಿ.ಜೆ ಅಬ್ದುಲ್‌ಕಲಾಂ ಅವರಿಗೆ ಅನಿಚಂಪಾಳ್ಯಂ ಪಂಚಾಯತ್‌ಗೆ ಸೇರಿದ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿ ಜನನಿ ಬರೆದ ಶುಭಾಶಯ ಪತ್ರ.



राष्ट्रपति के अतिरिक्त निजी सचिव
ADDITIONAL PRIVATE SECRETARY TO THE PRESIDENT

राष्ट्रपति भवन,
नई दिल्ली-110004.
RASHTRAPATI BHAVAN,
NEW DELHI - 110004

மார்ச் 10, 2004

அன்புச் செல்வி ஜனனிக்கு,

வணக்கம்.

தாங்கள் குடியரசுத் தலைவருக்கு எழுதிய கடிதம் கிடைத்தது. தாங்கள் நன்றாக உழைத்து, படித்து வாழ்வில் வெற்றியடைய குடியரசுத் தலைவர் தங்களுக்கு தமது நல்வாழ்த்துக்களைத் தெரிவித்துக் கொள்கிறார்.

வாழ்த்துக்களுடன்,

அன்புள்ள,

(ஜெ. ராதாகிருஷ்ணன்)

Selvi K. Janani
D/o D. Kumaran
447, Devanadha Sami Nagar
Maharajapuram Post
Villupuram - 605 062

ಪತ್ರದ ನಕಲು

ವಿದ್ಯಾರ್ಥಿನಿ ಜನನಿಗೆ ಮಾಜಿ ರಾಷ್ಟ್ರಪತಿ ಶ್ರೀಯುತ ಎ.ಪಿ.ಜೆ. ಅಬ್ದುಲ್ ಕಲಾಂ ರವರು ಬರೆದ ಮರು ಪತ್ರ.

ನಿಮ್ಮ ಮನೆಗೆ ಯಾವುದಾದರು ಪತ್ರ ಬಂದಿರುವುದೆ? ____________________

ಅದರಲ್ಲಿ ಯಾವ ವಿಷಯ ಬರೆದಿತ್ತು ? ____________________

ಎಲ್ಲಿಂದ ಬಂದಿದೆ ? ____________________

ಯಾರಿಂದ ಬಂದಿದೆ? ____________________

ಬಂದಿರುವ ಪತ್ರದಲ್ಲಿ ನಿಮ್ಮ ಮನೆಯ ವಿಳಾಸ ಎಲ್ಲಿ ಬರೆದ್ದಿತ್ತು?

ಬೇರೆ ಊರಿನಿಂದ ಬರುವ ಪತ್ರಗಳು ನಮಗೆ ಹೇಗೆ ಬಂದು ತಲುಪುತ್ತದೆ?



## ಒಂದು ಪತ್ರದ ಪ್ರಯಾಣ

ನಾವು ಪತ್ರಗಳನ್ನು ಅಂಚೆ ಪೆಟ್ಟಿಗೆಯಲ್ಲಿ ಹಾಕುತ್ತೇವೆ. ಅವುಗಳನ್ನು ಅಂಚೆ ಉದ್ಯೋಗಿಗಳಂದ ಸಂಗ್ರಹಿಸಲ್ಪಟ್ಟು ಅಂಚೆ ಕಛೇರಿಗೆ ತರಲಾಗುವುದು. ಅಲ್ಲಿ ಪತ್ರಗಳನ್ನು ಸ್ಥಳಗಳ ಆಧಾರದ ಮೇಲೆ ವಿಂಗಡಿಸಲಾಗುವುದು. ಅವುಗಳನ್ನು ಅಂಚೆ ಕಛೇರಿಯ ಮುದ್ರೆಹಾಕಿ, ರಸ್ತೆ, ಸಮುದ್ರ, ವಾಯುಮಾರ್ಗವಾಗಿ ಹಲವು ಸ್ಥಳಗಳಿಗೆ ಕಳುಹಿಸಲಾಗುವುದು. ಅಲ್ಲಿ ಪುನಃ ಪತ್ರಗಳ ಮೇಲೆ ಮುದ್ರೆ ಹಾಕಲಾಗುವುದು. ಹಲವು ಭಾಗಗಳಾಗಿ ವಿಂಗಡಿಸಿ ಪತ್ರಗಳ ಮೇಲಿರುವ ವಿಳಾಸದಾರರಿಗೆ ತಲುಪಿಸಲಾಗುವುದು.



ಅಂಚೆ ಕಛೇರಿಯಲ್ಲಿ ಅಂಚೆ ಕವರ್, ಅಂಚೆ ಕಾರ್ಡು, ಮನಿಯಾರ್ಡರ್ ಫಾರಂ, ಅಂಚೆ ಚೀಟಿ, ಸರ್ಕಾರಿ ಉದ್ಯೋಗಗಳಿಗೆ ಸೇರಲು ಪರೀಕ್ಷೆ ಬರೆಯುವ ಅರ್ಜಿಗಳನ್ನು ಮಾರಾಟ ಮಾಡುವರು.

ಉಳಿತಾಯ ಪತ್ರಗಳು, ವಿದ್ಯಾರ್ಥಿಗಳಿಗಾಗಿ ಸಣ್ಣ ಉಳಿತಾಯ ಯೋಜನೆಗಳು ಇರುವುದು. ತುರ್ತು ವಿಷಯಗಳನ್ನು ಅಂಚೆ ಕಛೇರಿಯಲ್ಲಿ ತಂತಿ ಮೂಲಕ ಅವಸರವಾಗಿ ಕಳುಹಿಸಲಾಗುವುದು. ಅಂಚೆ ಕಛೇರಿಗೆ ಹೋಗಿ ವಿಷಯಗಳನ್ನು ಸಂಗ್ರಹಿಸು.

ಇವು ಏನು? ಹೆಸರು ಬರೆ. ಬೆಲೆ ತಿಳಿಸು?

____________________ ____________________ ____________________









## ಮಾಡಿ ನೋಡು:

ವಿಧ ವಿಧವಾದ ಅಂಚೆ ಚೀಟಿಗಳನ್ನು ಸಂಗ್ರಹಿಸಿ ಚಿತ್ರಗಳನ್ನು ತಯಾರಿಸಿ ನೀನು ನಿನ್ನ ಸ್ನೇಹಿತನಿಗೆ ಪತ್ರ ಬರೆ. ನಿನ್ನ ಸ್ನೇಹಿತನು ನಿನಗೆ ಪತ್ರ ಬರೆಯಲು ತಿಳಿಸು. ಇಬ್ಬರು ಅಂಚೆ ಪೆಟ್ಟಿಗೆಯಲ್ಲಿ ಹಾಕಿರಿ ನಂತರ ಪತ್ರ ನಿಮ್ಮ ಮನೆಗೆ ಹೇಗೆ ಬಂದು ಸೇರಿತು ಎನ್ನುವುದನ್ನು ಚರ್ಚಿಸಿರಿ.








ನಿಮ್ಮ ಊರಿನಲ್ಲಿರುವ ಅಂಚೆ ಪೆಟ್ಟಿಗೆಯನ್ನು ಹೋಗಿನೋಡು. ಅದರಲ್ಲಿ ಬರೆದಿರುವ ಅಂಚೆ ಪತ್ರಗಳನ್ನು ತೆಗೆದುಕೊಳ್ಳುವ ವೇಳೆಯನ್ನು ತಿಳಿದು ಕೊ. ನಿಮ್ಮ ಬೀದಿಗೆ ಅಂಚೆ ಪತ್ರಗಳನ್ನು ತೆಗೆದು ಕೊಂಡು ಬರುವವರ ಹೆಸರು ______________________.



ದೂರ ಸಂಪರ್ಕ ಇಲಾಖೆಯ ಬೆಳವಣಿಗೆಯಿಂದ, ಅಂಚೆಯಲ್ಲಿ ಪತ್ರಗಳನ್ನು ಕಳುಹಿಸುವುದು, ತಂತಿ ಕಳುಹಿಸುವುದು ಕಡಿಮೆಯಾಗಿದೆ. ಗಣಕಯಂತ್ರ ಬಂದ ನಂತರ ಇ-ಮೇಲ್ ಮತ್ತು ಸೆಲ್‌ಫೋನ್ ಮೂಲಕವಾಗಿ ಸುಲಭವಾಗಿ ಬೇಗನೆ ವಿಷಯಗಳನ್ನು ಮುಟ್ಟಿಸಲಾಗುವುದು.











## ಬ್ಯಾಂಕ್

ಬ್ಯಾಂಕುಗಳು ಹಲವು ಇವೆ. ಬ್ಯಾಂಕುಗಳಲ್ಲಿ ಹಣವನ್ನು ಉಳಿತಾಯ ಮಾಡಬಹುದು. ಉಳಿತಾಯದ ಹಣವನ್ನು ಖಾತೆಯಲ್ಲಿ ಎಷ್ಟು ಬಾರಿಯಾದರು ಜಮಾ ಮಾಡಬಹುದು. ಉಳಿತಾಯ ಮಾಡಿದ ಹಣವನ್ನು ಅವಶ್ಯಕತೆ ಇರುವಾಗ ತೆಗೆದುಕೊಳ್ಳಬಹುದು. ಚಿನ್ನ, ಬೆಳ್ಳಿ, ಮುಖ್ಯವಾದ ದಾಖಲೆ ಪತ್ರಗಳನ್ನು ಬ್ಯಾಂಕಿನಲ್ಲಿ ರಕ್ಷಣೆ ಪೆಟ್ಟಿಯಲ್ಲಿ ಇಡಬಹುದು. ನಿನಗೆ ಗೊತ್ತಿರುವ ಬ್ಯಾಂಕುಗಳ ಹೆಸರುಗಳನ್ನು ಬರೆ______________________________

ಬ್ಯಾಂಕಿನಲ್ಲಿ ಉಳಿತಾಯ ಖಾತೆಯನ್ನು ತೆರೆಯಲು ನಿಯಮಗಳನ್ನು ತಿಳಿದು ಕೊ.

### ಸ್ವಯಂ ಚಾಲಿತ ಹಣ ನೀಡುವ ಯಂತ್ರ (A.T.M)






ಇದು ಸ್ವಯಂ ಚಾಲಿತ ಹಣ ನೀಡುವ ಯಂತ್ರ. ನಾವು ಬ್ಯಾಂಕ್ ಖಾತೆಯಲ್ಲಿ ಇರುವ ಹಣವನ್ನು ಬ್ಯಾಂಕಿನ ನಿರ್ದಿಷ್ಟ ಸಮಯದಲ್ಲಿ ಮಾತ್ರ ತೆಗೆದುಕೊಳ್ಳಬಹುದು. ಎ.ಟಿ.ಎಂ ಕಾರ್ಡ್ ಇದ್ದರೆ ಮಾತ್ರ ಹಣವನ್ನು ಯಾವಾಗಬೇಕಾದರು ತೆಗೆದುಕೊಳ್ಳಬಹುದು. ಇದು 24 ಗಂಟೆಯು ಕಾರ್ಯ ನಿರ್ವಹಿಸುತ್ತದೆ .

ಚೆಕ್ ಮತ್ತು ಡಿ.ಡಿ. ಬಗ್ಗೆ ತಿಳಿದುಕೊಂಡು ಬಾ.






## ನಮ್ಮ ಸ್ನೇಹಿತರು



ಚಿತ್ರಪಟವನ್ನು ನೋಡು. ಅದರಲ್ಲಿರುವ ಜನರು ಮಾಡುವ ಬೇರೆ ಬೇರೆ ಕೆಲಸಗಳನ್ನು ಬರೆಯಿರಿ.

_______________ _______________

_______________ _______________

_______________ _______________

ಜನರು ತಮ್ಮ ಅವಶ್ಯಕತೆಗೂ ಮತ್ತು ತಮ್ಮನ್ನು ನಂಬಿರುವ ಬಂಧುಗಳ ಅವಶ್ಯಕತೆಗೂ, ಕಷ್ಟಪಟ್ಟು ಹಣವನ್ನು ಸಂಪಾದಿಸುವರು. ಇದನ್ನು ವೃತ್ತಿ ಅಥವಾ ಕೆಲಸ ಎನ್ನುವೆವು. ನಾವು ವಾಸಿಸುವ ಸಮುದಾಯದಲ್ಲಿ ಹಲವು ಬಗೆಯಾದ ಕೆಲಸಗಳನ್ನು ಜನರು ಮಾಡುತ್ತಾರೆ.

ಎಲ್ಲಾ ಕೆಲಸಗಳಿಗೂ ಒಂದಕ್ಕೊಂದು ಸಂಬಂಧವಿದೆ.

ಇವರು ಅಂತಸ್ತಿನ ಕಟ್ಟಡಗಳನ್ನು ಕಟ್ಟುತ್ತಾರೆ. ಬಾಗಿಲು, ಕಿಟಕಿ, ತಯಾರು ಮಾಡಿ ಜೋಡಿಸಲಾಗುತ್ತದೆ. ನೀರಿನ ಪೈಪ್‌ಲೈನ್ ಜೋಡಣೆ ಮಾಡುವವರು ಪ್ಲಮ್‌ಬರ್. ಇವರು ಕಟ್ಟಡಗಳಿಗೆ, ಶೌಚಾಲಯಗಳಿಗೆ ಪೈಪ್‌ಲೈನ್ ಜೋಡಿಸುತ್ತಾರೆ ಮತ್ತು ದುರಸ್ತಿ ಮಾಡುತ್ತಾರೆ.





### ಯಾರು ಇವರುಗಳು ?

- ಕಟ್ಟಡ ಕಟ್ಟುವವರುಗಳು ______________________.
- ಬಾಗಿಲು, ಕಿಟಕಿ ಮಾಡುವವರು ______________________.
- ಕುಡಿಯುವ ನೀರಿನ ಪೈಪ್ ಲೈನ್ ಜೋಡಿಸುವವರು ___________.
- ಶಾಲೆಯ ಸಮವಸ್ತ್ರ ಹೊಲಿಯುವವರು ______________.
- ಬಟ್ಟೆಯನ್ನು ನೇಯುವವರು ______________________.





ಇವರ ರೀತಿಯಲ್ಲಿ ನಿನ್ನ ಜೀವನಕ್ಕೆ ಸಹಾಯ ಮಾಡುವ ಇತರ ಪ್ರಮುಖವಾದ ಕಾರ್ಮಿಕರ ಹೆಸರುಗಳನ್ನು ಪಟ್ಟಿಮಾಡು.

________________ ________________

________________ ________________

________________ ________________

________________ ________________



ನಿತ್ಯ ಜೀವನಕ್ಕೆ ಬೇಕಾದ ಅವಶ್ಯಕ ವಸ್ತುಗಳನ್ನು ನೋಡಿದೆವು. ಅವುಗಳಲ್ಲಿ ತುಂಬಾ ಮುಖ್ಯವಾದದ್ದು ನಮ್ಮ ದೇಹದ ಆರೋಗ್ಯ. ನಾವು ಆರೋಗ್ಯವಾಗಿ ಬಾಳಲು ಆರೋಗ್ಯ ಕೇಂದ್ರಗಳು ಸಹಾಯಕವಾಗಿದೆ. ಸರ್ಕಾರವೂ ಮತ್ತು ಸಮಾಜ ಸೇವೆ ಸಂಸ್ಥೆಗಳು ಇದಕ್ಕಾಗಿ ಹಲವು ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ. ನಮಗೆ ಆರೋಗ್ಯ ಸರಿಯಿಲ್ಲದಿದ್ದಾಗ ಚಿಕಿತ್ಸೆ ಕೊಡುವವರು ವೈದ್ಯರು.



ದಾದಿಯರು (ನರ್ಸ್) ವಾರಕ್ಕೆ ಒಂದುಸಾರಿ ಗ್ರಾಮಗಳಿಗೆ ಹೋಗಿ ಔಷಧಿಗಳನ್ನು ಹಂಚುತ್ತಾರೆ. ಪಟ್ಟಣಗಳಲ್ಲಿ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆಯುತ್ತಾರೆ. ಗ್ರಾಮಗಳಿಗೆ ಸಂಚಾರಿ ಆರೋಗ್ಯ ವಾಹನಗಳನ್ನು ಜನರ ಒಳಿತಿಗಾಗಿ ಏರ್ಪಡಿಸಲಾಗಿದೆ. ಇವರುಗಳು ಸಾರ್ವಜನಿಕರಿಗೆ ಚಿಕಿತ್ಸೆ ನೀಡುತ್ತಾರೆ.

ಈವಾಗ ಸರ್ಕಾರಿ ಆರೋಗ್ಯ ಕೇಂದ್ರಗಳು, ಸಿದ್ದ ಔಷದ ಕೇಂದ್ರಗಳು, ಮುಖ್ಯತ್ವವನ್ನು ಪಡೆದು ಕೊಂಡಿದೆ. ಆರೋಗ್ಯ ಸರಿಯಿಲ್ಲದ ಪಕ್ಷಿಗಳು ಮತ್ತು ಪ್ರಾಣಿಗಳಿಗೆ ಚಿಕಿತ್ಸೆ ಕೊಡಲು ಪಶುವೈದ್ಯ ಕೇಂದ್ರಗಳಿವೆ.



ನಿನ್ನ ವಾಸ ಸ್ಥಳದ ಸುತ್ತಲಿರುವ ಜನರು ಮಾಡುವ ಯಾವುದಾದರು ಐದು ಕೆಲಸಗಳನ್ನು ಬರೆ. ಅವರು ಮಾಡುವ ಕೆಲಸಗಳಿಗೆ ಅನುಗುಣವಾಗಿ ಅವರನ್ನು ಯಾವ ಹೆಸರಿನಿಂದ ಕರೆಯುವರು ?

| ಮಾಡುವ ಕೆಲಸ | ಕೆಲಸದ ಹೆಸರು |
|---|---|
| ಆರೋಗ್ಯ ಸರಿಯಿಲ್ಲದವರಿಗೆ ಚಿಕಿತ್ಸೆ | ವೈದ್ಯರು |
| | |
| | |
| | |
| | |

# ನಮ್ಮಲ್ಲಿ ಒಬ್ಬರು



ಚಿತ್ರದಲ್ಲಿರುವವರು ಯಾವ ಯಾವ ಕೆಲಸ ಮಾಡುತ್ತಾರೆ?

ನಿನ್ನ ಪ್ರದೇಶದಲ್ಲಿ ಬೇರೆಯವರಿಗೆ ಸಹಾಯ ಮಾಡುವ ರೀತಿಯಲ್ಲಿ ಕೆಲಸ ಮಾಡುವ ಜನರನ್ನು ನೋಡಿರುವೆಯ ? ಹೌದು/ಇಲ್ಲಾ.

ನಿನ್ನ ಸುತ್ತಮುತ್ತಲ ಸ್ಥಳಗಳನ್ನು ಶುದ್ಧ ಮಾಡುವವರು ಯಾರು? ______________

ಯಾವ ಯಾವ ರೀತಿ ನಿನ್ನ ಸುತ್ತಮುತ್ತಲ ಪರಿಸರವನ್ನು ಶುದ್ಧವಾಗಿ ಇಟ್ಟುಕೊಳ್ಳುವೆ?

______________________________________________

ನಾವು ಆರೋಗ್ಯವಾಗಿ ಜೀವಿಸಲು ಮುಖ್ಯವಾಗಿ ಸಹಾಯ ಮಾಡುವ ಕೆಲಸಗಾರರ ಬಗ್ಗೆ ತಿಳಿದುಕೊಳ್ಳೋಣ ?

ರಸ್ತೆ ಶುದ್ಧ ಮಾಡುವುದು, ದುರಸ್ತಿ ಮಾಡುವುದು, ಸಾರ್ವಜನಿಕ ಶೌಚಾಲಯ, ಸಾರ್ವಜನಿಕ ಕಸದ ತೊಟ್ಟಿ ಮತ್ತು ಕೊಳಚೆ ನೀರು ದುರಸ್ತಿ ಮಾಡುವ ಸ್ನೇಹಿತರುಗಳು ನಮ್ಮ ಸಮಾಜದಲ್ಲಿ ಇರುವವರು.

ಅವರುಗಳು ನಮಗೆ ಅತ್ಯುನ್ನತ ಸೇವೆ ಮಾಡುವರು, ಅವರಿಗೆ ಯಾವ ರೀತಿ ಸಹಾಯ ಮಾಡಬೇಕು ಗೊತ್ತಾ?

ನಾವು ಶೌಚಾಲಯಗಳನ್ನು ವ್ಯವಸ್ಥಿತವಾಗಿ ಬಳಸಬೇಕು ತ್ಯಾಜ ವಸ್ತುಗಳನ್ನು ಒಂದು ಕಡೆ ಸಂಗ್ರಹಿಸಿ ಹಾಕಬೇಕು ಗಲೀಜು ನೀರು ಬಚ್ಚಲಲ್ಲಿ ನಿಲ್ಲದ ಹಾಗೆ ಮಾಡಬೇಕು. ನಾವು ಬೀದಿಗಳಲ್ಲಿ ಉಗಿಯಬಾರದು, ವ್ಯರ್ಥವಾಗಿ ತ್ಯಾಜಗಳನ್ನು ಎಸೆಯಬಾರದು ಏಕೆಂದರೆ ನಮ್ಮಂತ ಮನುಷ್ಯರುತ್ತಾನೆ ಅವುಗಳನ್ನು ಶುದ್ಧಿಕರಿಸುವವರು. ಒಂದು ದಿನ ಅವರುಗಳು ಕೆಲಸ ಮಾಡದಿದ್ದರೆ ಏನಾಗುವುದು ?

☺ ನಿನ್ನ ಊರಿನಲ್ಲಿ ನಿನಗೆ ತಿಳಿದಿರುವ ಬೇರೆ ಕೆಲಸಗಾರರು ಯಾರು ? ಯಾರು?

☺ ನಿನ್ನ ಸುತ್ತಮುತ್ತಲ್ಲಿರುವ ಭಾಗಗಳಲ್ಲಿ ದುರಸ್ತಿ ನಡೆಯುತ್ತಿರುವ ಕೆಲಸಗಳಾವುವು ಹೇಳು ?

☺ ನಿಮ್ಮ ಬೀದಿಗಳನ್ನು ಶುದ್ಧ ಮಾಡಿಸಿ, ಬೀದಿ ದೀಪಗಳನ್ನು ಸರಿ ಪಡಿಸಿಕೊಡುವವರು ಯಾರು?

☺ ನಿಮ್ಮ ಮನೆಗೆ ಕುಡಿಯುವ ನೀರಿನ ಸಂಪರ್ಕ ಮತ್ತು ಕಾಲುವೆಗಳ ಜೋಡನೆ ಮಾಡಿ ಕೊಡುವವರು ಯಾರು ?

ಎಲ್ಲಾರಿಗೂ ಸಾರ್ವಜನಿಕವಾಗಿ, ಕೆಲಸಗಳನ್ನು ಒಂದೇ ರೀತಿಯಾಗಿ ಮಾಡಿ ಕೊಡುವ ಆಡಳಿತ ಸಂಸ್ಥೆಗೆ ಪಂಚಾಯಿತಿ ಎಂದು ಹೆಸರು. ಬೀದಿ ದೀಪ, ಕುಡಿಯುವ ನೀರು, ರಸ್ತೆಗಳು, ಆರೋಗ್ಯ, ಮನೋರಂಜನೆ, ಪಂಚಾಯತ್ ಆಡಳಿತವು ಪೂರೈಸುತ್ತದೆ.

| | |
|---|---|
| ಗ್ರಾಮ | ಪಂಚಾಯಿತಿ |
| ದೊಡ್ಡಗ್ರಾಮ | ಪುರಸಭೆ |
| ಪಟ್ಟಣ | ನಗರ ಸಭೆ |
| ದೊಡ್ಡ ಪಟ್ಟಣ | ಮಹಾನಗರ ಪಾಲಿಕೆ |

ಇವುಗಳು ಸಾರ್ವಜನಿಕರಿಗೆ ಅಗತ್ಯವಿರುವ ಮೂಲ ಸೌಕರ್ಯಗಳನ್ನು ಮಾಡಿಕೊಡುವುವು. ನಿಮ್ಮ ಊರು ಯಾವ ಬಗೆಗೆ ಸೇರಿದೆ ?

ಪಂಚಾಯಿತಿ ☐ ಪುರಸಭೆ ☐ ನಗರಸಭೆ ☐ ಮಹಾನಗರ ಪಾಲಿಕೆ ☐

ನಿಮ್ಮ ಮನೆಗೆ ಬೇಕಾದ ಕುಡಿಯುವ ನೀರು ಎಲ್ಲಿಂದ ದೊರೆಯುತ್ತದೆ ?

ಸಾರ್ವಜನಿಕರ ಮೂಲಭೂತ ಅವಶ್ಯಕತೆಗಳಲ್ಲಿ ಒಂದು ನೀರು. ಕಡಿಮೆ ಇರುವ ಸ್ಥಳಗಳಲ್ಲಿ ನೀರು ಇಂಗುವ ಗುಂಡಿಗಳನ್ನು ಮಾಡಿ ನೀರನ್ನು ಇಂಗಿಸಲಾಗುವುದು ಮತ್ತು ನೀರು ತೊಟ್ಟಿಗಳನ್ನು ಮಾಡಿಸಿಕೊಡುವರು.




## ನ್ಯಾಯ ಬೆಲೆ ಅಂಗಡಿ

ಕಡಿಮೆ ಬೆಲೆಯಲ್ಲಿ ಉತ್ತಮ ಆಹಾರ ವಸ್ತುಗಳು ಸಿಗುವ ಸ್ಥಳ ನ್ಯಾಯ ಬೆಲೆ ಅಂಗಡಿ. ಇಲ್ಲಿ ಮನೆಗಳಿಗೆ ಬೇಕಾದ ಆಹಾರ ವಸ್ತುಗಳನ್ನು ಮಾರುವುದರಿಂದ ಇದನ್ನು ವಿನಿಯೋಗ ಅಂಗಡಿ ಎಂದು ಕರೆಯುತ್ತಾರೆ.

ಆಹಾರ ವಸ್ತುಗಳನ್ನು ಪಡೆಯುವುದಕ್ಕೆ ಪಡಿತರ ಚೀಟಿ ಅವಶ್ಯಕವಾಗಿ ಬೇಕು. ಪಡಿತರ ಚೀಟಿ ಗುರುತಿನ ಚೀಟಿಯಾಗಿ ಬಳಸಲಾಗುವುದು. ಸಾರ್ವಜನಿಕರ ಆರ್ಥಿಕ ಮಟ್ಟದ ಅನುಗುಣವಾಗಿ ಪಡಿತರ ಚೀಟಿಯನ್ನು ವಿತರಿಸಲಾಗುವುದು. ಭಾರತದ ಎಲ್ಲಾ ಭಾಗಗಳಲ್ಲಿ ನ್ಯಾಯಬೆಲೆ ಅಂಗಡಿಗಳಿವೆ.

ನಿಮ್ಮ ಊರಿನ ನ್ಯಾಯಬೆಲೆ ಅಂಗಡಿಯಲ್ಲಿ ದೊರೆಯುವ ವಸ್ತುಗಳನ್ನು ಪಟ್ಟಿಮಾಡು






| | | |
|---|---|---|
| ಆರಕ್ಷಕ ಠಾಣೆ | ☎ | 100 |
| ಅಗ್ನಿ ಶಾಮಕ ಠಾಣೆ | ☎ | 101 |
| ತುರ್ತು ಚಿಕಿತ್ಸೆ ವಾಹನ | ☎ | 102<br>108 |

**ಚರ್ಚಿಸು....**

ಚಿತ್ರದಲ್ಲಿ ನೀನು ಏನು ನೋಡುವೆ?

ನೀನು ಆ ಸ್ಥಳದಲ್ಲಿ ಇದ್ದರೆ ಅವಸರವಾಗಿ ಏನು ಮಾಡುವೆ ?

ಇವರುಗಳಲ್ಲಿ ಮೊದಲು ಯಾರನ್ನು ನೀರು ಕರೆಯುವೆ?

ಅಗ್ನಿಶಾಮಕ ಠಾಣೆಯಲ್ಲಿ ಕೆಲಸ ಮಾಡುವವರನ್ನು ಅಗ್ನಿಶಾಮಕ ಧಳದವರು ಎಂದು ಕರೆಯಲಾಗುವುದು. ಆಕಸ್ಮಿಕವಾಗಿ ಬೆಂಕಿ ಹತ್ತಿಕೊಂಡಾಗ ಬೆಂಕಿ ಆರಿಸಲು ಸಹಕರಿಸುವರು ಜೀವರಕ್ಷಕರು. ಇವರು ವಸ್ತುಗಳ ರಕ್ಷಣೆ, ಪ್ರಕೃತಿ ವಿಕೋಪವಾದಾಗ ಜನರನ್ನು ರಕ್ಷಿಸಿ ಸುರಕ್ಷಿತವಾದ ಸ್ಥಳಗಳಿಗೆ ಕರೆದು ತರುವರು.



## ಆರಕ್ಷಕರು



ಇವರು ನಿಮಗೆ ಗೊತ್ತಾ?

ಇವರು ಎಲ್ಲಿ ಇರುತ್ತಾರೆ?

ಇವರ ಕೆಲಸವೇನು?

ನಮ್ಮಲ್ಲಿರುವ ವಸ್ತುಗಳು ಕಳ್ಳತನವಾದಾಗ ಅಥವಾ ನಮಗೆ ಯಾವುದಾದರೂ ಅಪಘಾತವಾದಾಗ ನಮಗೆ ಸಹಾಯ ಮಾಡುವುದು ಇವರ ಕರ್ತವ್ಯವಾಗಿದೆ. ಒಂದೊಂದು ಭಾಗದಲ್ಲೂ ಅಲ್ಲಿ ಕೆಲಸ ಮಾಡುವ ಆರಕ್ಷಕರು ಕಾನೂನು ನಿಯಮಗಳನ್ನು ಸಂರಕ್ಷಿಸುತ್ತಾರೆ.




ಆರಕ್ಷಕರು ನಾವು ಕೊಡುವ ದೂರುಗಳನ್ನು ದಾಖಲಿಸಿಕೊಂಡು ಅದಕ್ಕೆ ತಕ್ಕಂತೆ ನಡವಡಿಕೆಯನ್ನು ತೆಗೆಯುವರು. ಆರಕ್ಷಕರು 24 ಗಂಟೆಗಳ ಕಾಲವೂ ಕೆಲಸ ಮಾಡುವುದರಿಂದ ನಾವು ಧೈರ್ಯದಿಂದ ಜೀವಿಸುತ್ತೇವೆ.



ನಿಮ್ಮ ಊರಿನಲ್ಲಿ ಆರಕ್ಷಕ ಠಾಣೆ ಇದೆಯೇ? ನಿಮಗೆ ಗೊತ್ತಿರುವ ಯಾರಾದರೂ ಸೇನಾ ದಳದಲ್ಲಿ ಕೆಲಸ ಮಾಡುತ್ತಾರಾ?

ಈ ಮೂರರಲ್ಲಿ ನಿನಗೆ ಇಷ್ಟವಾದುದು ಯಾವುದು?



☐ ಭೂಸೇನೆ



☐ ನೌಕಸೇನೆ



☐ ವಾಯುಸೇನೆ

ಎಲ್ಲಾ ಜನರಿಗೂ ಉಪಯೋಗವಾಗುವ ರೀತಿಯಲ್ಲಿ ಕಾರ್ಯನಿರ್ವಹಿಸುವ ಸಂಸ್ಥೆಗಳನ್ನು ಸಾರ್ವಜನಿಕ ಸಂಸ್ಥೆಗಳು ಎನ್ನಲಾಗುತ್ತದೆ. ಅದು ಸರ್ಕಾರಕ್ಕೆ ಸೇರಿದುದಾಗಿದೆ. ಇದು ಪ್ರತ್ಯೇಕ ಮನುಷ್ಯನಿಗೆ ಹಕ್ಕು ಇರುವಂತಹದ್ದಲ್ಲ. ಅದರ ಕಾರ್ಯಗಳು, ಪ್ರತಿಫಲವೂ ಎಲ್ಲವೂ ಎಲ್ಲರಿಗೂ ಸೇರಿದಂತವುಗಳಾಗಿವೆ.

# ಮಾದರಿ ಪ್ರಶ್ನೆ ಪತ್ರಿಕೆ

## ಎರಡನೇಯ ಪರ್ವ

ಮೂರನೇಯ ತರಗತಿ — ಸಮಯ : 2 ಗಂಟೆಗಳು

ಸಮಾಜ ವಿಜ್ಞಾನ — ಗರಿಷ್ಠ ಅಂಕ : 60

(5X1=5)

**I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ:**

1.ಅತಿ ವೇಗವಾಗಿ ಚಲಿಸುವ ವಾಹನ ____________ .

ಅ) ಬಸ್ಸು ಆ) ರೈಲು ಇ) ವಿಮಾನ

2. ____________ ಬಲಿತ ನಂತರ ಕೊಯ್ಯಲನ್ನು ಮಾಡುವರು.

ಅ) ಬೆಳೆ ಆ) ಕಳೆ ಇ) ಬೀಜ

3. ನ್ಯಾಯ,ಕಾನೂನು ನಿಯಮಗಳನ್ನು ಸಂರಕ್ಷಿಸುವವರು ____________ .

ಅ) ಅಂಚೆ ಕಚೇರಿಯವರು ಆ) ಆರಕ್ಷಕರ ಠಾಣೆಯವರು ಇ) ಬಸ್ಸ್ ನಿಲ್ದಾಣದವರು

4. ಕೆಳಗಿನವುಗಳಲ್ಲಿ ಯಾವುದನ್ನು ಉದ್ಯೋಗ ಎಂದು ಪರಿಗಣಿಸುತ್ತೇವೆ?____________ .

ಅ) ಪತ್ರ ಬರೆಯುವುದು ಆ) ಶಾಲೆಗೆ ಹೋಗುವುದು ಇ) ವೈದ್ಯವೃತ್ತಿ

5. ನಾವು ಹೆಚ್ಚಾಗಿ ಆಹಾರವಾಗಿ ಸೇವಿಸುವ ಪದಾರ್ಥ ____________ .

ಅ)ಜೋಳ ಆ) ಅಕ್ಕಿ ಇ) ಬೀಜ

(5X1=5)

**II. ಸರಿ - ತಪ್ಪು ಗುರುತಿಸಿ ಆವರಣದಲ್ಲಿ ಬರೆಯಿರಿ :**

1. ರೈಲು ಗಾಡಿಯು ಕಂಬಿ ಮಾರ್ಗದಲ್ಲಿ ಚಲಿಸುತ್ತದೆ. ( )

2. ಅವಸರವಾದ ಸುದ್ದಿ ಸಂದೇಶಗಳನ್ನು ತಂತಿ ಮೂಲಕ ಕಳುಹಿಸಲಾಗುವುದು. ( )

3. ನಮಗೆ ಆರೋಗ್ಯ ಸರಿಯಿಲ್ಲದ ಸಮಯದಲ್ಲಿ ಪಶು ವೈದ್ಯರು ನಮಗೆ ಚಿಕಿತ್ಸೆ ನೀಡುತ್ತಾರೆ.( )

4. ಮೆಣಸು, ಶುಂಠಿಯು ನೈಸರ್ಗಿಕ ಔಷಧ ಗುಣವನ್ನು ಹೊಂದಿರುವ ಆಹಾರ ಪದಾರ್ಥಗಳು. ( )

5. ಟೀ ಮತ್ತು ಕಾಫಿ ತೋಟದ ಬೆಳೆಗಳು. ( )

**III. ಖಾಲಿ ಬಿಟ್ಟ ಸ್ಥಳಗಳನ್ನು ತುಂಬಿರಿ :** (5x1=5)

1. ಚಕ್ರದ ಸೃಷ್ಟಿಯಿಂದ __________ ಸುಲಭವಾಯಿತು.
2. ಕಡಿಮೆ ಅವಧಿಯಲ್ಲಿ ಹೆಚ್ಚು ದೂರವನ್ನು ಮುಟ್ಟಲು ಉಪಯುಕ್ತವಾದ ಸಂಚಾರ ಮಾರ್ಗ ________
3. ಆಹಾರದಿಂದ ನಮ್ಮ ಶರೀರಕ್ಕೆ __________ ಸಿಗುತ್ತದೆ.
4. ಗ್ರಾಮ ಮಕ್ಕಳ ಮೂಲ ಸೌಕರ್ಯಗಳನ್ನು __________ ಪೂರ್ತಿ ಮಾಡುತ್ತದೆ.
5. ಚಿನ್ನ, ಬೆಳ್ಳಿಯಂತಹುಗಳನ್ನು ಬ್ಯಾಂಕಿನ __________ ಲ್ಲಿ ಇಟ್ಟು ರಕ್ಷಿಸಲಾಗುತ್ತದೆ.

**IV. ಹೊಂದಿಸಿ ಬರೆಯಿರಿ :** (5 x 1 = 5)

| | | |
|---|---|---|
| 1. ಪರಿಸರ ಮಾಲಿನ್ಯ ತಡೆಗಟ್ಟಲು | - | ಬೆಲ್ಲ |
| 2. ಪ್ರವಾಹ, ನಿವಾಹರಣೆ ವೇಳೆ | - | ಧಾನ್ಯಗಳು |
| 3. ಕಬ್ಬು | - | ಪಡಿತರ ಚೀಟಿ |
| 4. ಸಾಮ, ಕಂಬು | - | ಹೆಲಿಕ್ಯಾಪ್ಟರ್ |
| 5. ನ್ಯಾಯ ಬೆಲೆ ಅಂಗಡಿ | - | ಸೈಕಲ್ |

**V. ಗುಂಪಿಗೆ ಸೇರದ ಪದವನ್ನು ಆರಿಸಿ ವೃತ್ತ ಹಾಕಿರಿ.** (5 x 1 = 5)

1. ಹಸು, ನಾಯಿ, ಬಾತುಕೋಳಿ, ಕುದುರೆ.
2. ರಸ್ತೆಮಾರ್ಗ, ಕಲ್ಲುಮಾರ್ಗ,ಜಲಮಾರ್ಗ, ವಾಯುಮಾರ್ಗ.
3. ಹಡಗು, ವಿಮಾನ, ತೆಪ್ಪ, ಹೆಲಿಕ್ಯಾಪ್ಟರ್.
4. ಮೆಣಸು, ಅರಿಸಿಣ, ಸಾಸಿವೆ, ಕೀರೆ ಸೊಪ್ಪು.
5. ಸರ್ಕಾರ, ಪಂಚಾಯಿತಿ, ಪುರಸಭೆ, ನಗರಸಭೆ.

**VI. ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳನ್ನು ಉತ್ತರಿಸಿರಿ :** (5x1=5)

1. ನಾವು ಆಹಾರವಾಗಿ ಸೇವಿಸುವ ಯಾವುದಾದರು ಐದು ಪದಾರ್ಥಗಳನ್ನು ಹೆಸರಿಸಿರಿ?
2. ಕೆಳಗಿನವುಗಳಲ್ಲಿ ರಸ್ತೆಮಾರ್ಗ, ಜಲಮಾರ್ಗ, ಹಾಗೂ ವಾಯು ಮಾರ್ಗದಲ್ಲಿ ಚಲಿಸುವ ವಾಹನಗಳನ್ನು ಬೇರ್ಪಡಿಸಿ ಬರೆಯಿರಿ?
(ಬಸ್ಸು, ಹಡಗು, ಸೈಕಲ್, ವಿಮಾನ, ರೈಲು, ಎತ್ತಿನಗಾಡಿ, ಹೆಲಿಕ್ಯಾಪ್ಟರ್, ದೋಣಿ, ತೆಪ್ಪ.)
3. ನಿನಗೆ ಇಷ್ಟವಾದ ಕೆಲಸ ಯಾವುದು? ಏಕೆ?
4. ಪ್ರವಾಹ ಮತ್ತು ನಿವಾಹರಣಿ ವೇಳೆಗಳಲ್ಲಿ ಉಪಯುಕ್ತವಾಗಿರುವ ಸಂಚಾರ ಸಾಧನ? ಯಾವುದು? ಅದು ಯಾವ ರೀತಿಯಲ್ಲಿ ಉಪಯೋಗವಾಗಿದೆ?
5. ನೀನು ಬೇರೆಯವರಿಗೆ ಬರೆಯುವ ಪತ್ರ ಹೇಗೆ ಅವರನ್ನು ಸೇರುತ್ತದೆ ಎಂಬುದನ್ನು ವಿವರಿಸಿ ಬರೆ.
6. ನೈಸರ್ಗಿಕವಾಗಿ ಔಷಧ ಗುಣಗಳನ್ನು ಹೊಂದಿರುವ ಆಹಾರ ಪದಾರ್ಥಗಳಲ್ಲಿ ಯಾವುದಾದರು ಐದನ್ನು ಬರೆಯಿರಿ?

**VII. ವಿವರವಾಗಿ ಉತ್ತರಿಸಿರಿ :** (4x5=20)

1. ಭತ್ತವು ಚೆನ್ನಾಗಿ ಬೆಳೆಯಲು ಬೇಕಾದವು ಯಾವುವು?
2. ಒಂದು ಮನೆಯನ್ನು ಕಟ್ಟಲು ಯಾವ ಯಾವ ಕೆಲಸದವರ ಸಹಾಯ ಬೇಕು?
3. ನಾವು ಯಾವ ಯಾವ ಕಾರಣಗಳಿಗಾಗಿ ಪ್ರಯಾಣ ಬೆಳೆಸುತ್ತೇವೆ? ನಿಮ್ಮ ಶಾಲೆಯಿಂದ ಪ್ರವಾಸ ಹೊರಡುವುದಾಗಿ ತಿಳಿದುಕೊ? ಹಾಗಾದರೆ ಅದಕ್ಕೆ ಹೇಗೆ ಯೋಜನೆ ಹಾಕಿಕೊಳ್ಳುವಿರಿ ?
ಯಾವ ಸ್ಥಳ? ಎಷ್ಟು ದಿನ? ಯಾವ ವಾಹನ? ಎಷ್ಟು ವಿದ್ಯಾರ್ಥಿಗಳು ಎಂಬುದನ್ನು ಬರೆಯಿರಿ.

# 'ನನ್ನಿಂದ ಸಾಧ್ಯ, ನಾನು ಮಾಡಿದೆ'
## ('I can, I did')
## ವಿದ್ಯಾರ್ಥಿಗಳ ಚಟುವಟಿಕೆ ದಾಖಲೆ

**ವಿಷಯ :**

| ಕ್ರ.ಸಂ | ತಾರೀಖು | ಪಾಠದ ಸಂಖ್ಯೆ | ಪಾಠದ ಹೆಸರು | ಚಟುವಟಿಕೆಗಳು | ಅಭಿಪ್ರಾಯಗಳು |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |